ಮಕ್ಕಳಿದೆ ಎಚ್ಚರ

ದೊಡ್ಡ ಮಟ್ಟದ ಜಗಳಗಳು ಮನೆಯಲ್ಲಿ ಚಿಕ್ಕಪುಟ್ಟ ವಿಷಯಗಳಿಗಾಗಿ ಆಗುತ್ತದೆ. ಹೊಂದಾಣಿಕೆಯೂ ಒಳ್ಳೆಯ ಮನೋಭಾವವೂ ಇದ್ದಾಗ ಎಷ್ಟೋ ಜಗಳಗಳು ಹಗುರವಾಗಿ ಸರಿದು ಹೋಗುತ್ತವೆ. ಇದನ್ನು ಉದಾಹರಣೆಯೊಂದರ ಮೂಲಕ ನೋಡೋಣ. ಮನೆಯೊಂದರಲ್ಲಿ ಅತ್ತೆ ಅತಿ ದೊಡ್ಡ ಹುದ್ದೆಯಲ್ಲಿದ್ದರು. ಸೊಸೆಯದು ಸಾಧಾರಣ ಹುದ್ದೆ. ಮನೆಯ ಆರ್ಥಿಕ ಹಿತದೃಷ್ಟಿಯಿಂದ ಹೆರಿಗೆ ಸಂದರ್ಭದಲ್ಲಿ ತಾನೇ ಕೆಲಸ ಬಿಡುವುದಾಗಿ ಸೊಸೆ ಹೇಳಿದಳು. ಅತ್ತೆ ಕುಟುಂಬಕ್ಕೆ ನೀಡುವ ಆಸರೆಯನ್ನು ಆಕೆ ಗುರುತಿಸಿದ್ದಳು. ಸೊಸೆಯ ನಿರ್ಧಾರವನ್ನು ಅತ್ತೆಯೂ ಗೌರವಿಸಿ ಆಕೆಗೆ ಒತ್ತಾಸೆಯಾಗಿದ್ದರು. ಈ ಹೊಂದಾಣಿಕೆಯೇ ಆ ಕುಟುಂಬದ ನೆಮ್ಮದಿಯ ತಳಹದಿ. ಅಂದರೆ ಹೊಂದಾಣಿಕೆಯ ಅವಶ್ಯಕತೆ ಕೇವಲ ಗಂಡ ಹೆಂಡಿರ ನಡುವೆ ಮಾತ್ರ ಬರುವುದಿಲ್ಲ. ಮನೆಯ ಇತರ ಸದಸ್ಯರೊಂದಿಗಿನ ಹೊಂದಾಣಿಕೆ ಎಷ್ಟೋ ಮಟ್ಟಿಗಿನ ನೆಮ್ಮದಿಯನ್ನು ಕೊಡುತ್ತದೆ.

‘ಜಗಳಗಳನ್ನು ಬಗೆಹರಿಸಿಕೊಂಡು ಅಪ್ಪ ಅಮ್ಮ ಒಗ್ಗಟ್ಟಾಗಿ ಮಗುವಿನ ಮುಂದೆ ನಿಲ್ಲಬೇಕು ಎಂಬ ಜವಾಬ್ದಾರಿಯನ್ನು ರೂಢಿಸಿಕೊಳ್ಳುವುದು ಮುಖ್ಯ’ ಎನ್ನುವುದು ಡಾ. ಪ್ರೀತಿ ಗಟ್ಟಿಯಾಗಿ ಹೇಳುವ ಕಿವಿಮಾತು.

ಮಕ್ಕಳನ್ನು ಬೆಳೆಸುವ ಸೂಕ್ಷ್ಮಗಳು, ಪತಿಪತ್ನಿ ನಡುವಿನ ಹೊಂದಾಣಿಕೆ – ಇಂಥ ಸಂಗತಿಗಳು ಅನೇಕರ ಪಾಲಿಗೆ, ಇವೆಲ್ಲ ಭಾವಾವೇಶದ ಮಧ್ಯಮವರ್ಗದವರಿಗೆ ಸಂಬಂಧಿಸಿದ ಸಮಸ್ಯೆಗಳು ಅಂತ ಅನ್ನಿಸಬಹುದು. ಆದರೆ ಪರಿಸ್ಥಿತಿ ಹಾಗಿಲ್ಲ. ಶ್ರೀಮಂತರೋ ಮಧ್ಯಮರೋ ಬಡವರೋ – ಎಲ್ಲ ಕುಟುಂಬಗಳಲ್ಲೂ ಮಕ್ಕಳ ಮನಸ್ಸು ಒಂದೇ.

ಅವರದು ಪ್ರೇಮವಿವಾಹ. ಇಬ್ಬರು ಮಕ್ಕಳಾದ ಬಳಿಕ ಸಣ್ಣಪುಟ್ಟ ಜಗಳಗಳು ಶುರುವಾದವು. ಒಮ್ಮೆ ಜಗಳ ತಾರಕಕ್ಕೇರಿ ಪತ್ನಿಯ ಕಡೆಯವರು ಅವನಿಗೆ ಹೊಡೆದುಬಿಟ್ಟರು. ಆತನ ಸಿಟ್ಟು ನೆಟ್ಟಿಗೇರಿ, ವಿಚ್ಛೇದನ ಕೋರಿದ. ಆದರೆ ಸೋಡಾಚೀಟಿ ಸಿಗುವ ಮೊದಲೇ ಮತ್ತೊಂದು ಮದುವೆಯನ್ನೂ ಆದ. ಎರಡನೇ ಪತ್ನಿಯು ಮಗುವನ್ನು ಹಡೆದಾಗ, ತನ್ನ ಮೊದಲ ಪತ್ನಿಯ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶವೇ ಅವನ ಆದ್ಯತೆಯಾಗಿತ್ತು. ಹೊಸ ಪುಟಾಣಿ ಮಗುವಿನ ಫೋಟೊ ಸ್ಟೇಟಸ್ ಹಾಕುವುದು, ಹೊಗಳುವುದು, ಫೇಸ್‌ಬುಕ್‌ನಲ್ಲಿ ಅತಿಯಾಗಿ ಸಂಭ್ರಮಿಸುವುದನ್ನು ಮಾಡುತ್ತಿದ್ದ. ಇದೆಲ್ಲವನ್ನೂ ಮೊದಲ ಹೆಂಡತಿಯ ಮಗ ಗಮನಿಸುತ್ತಲೇ ಇದ್ದ. ಅತ್ತ ಮೊದಲ ಪತ್ನಿಯು ತನ್ನ ನೋವನ್ನೆಲ್ಲ ಮಗನಲ್ಲಿ ತೋಡಿಕೊಳ್ಳುತ್ತ ಹಗುರಾಗುತ್ತಿದ್ದಳು. ಈ ಒಟ್ಟು ಪ್ರಕ್ರಿಯೆಯಲ್ಲಿ ಅಪ್ಪ ಅಮ್ಮಂದಿರಿಬ್ಬರೂ ಆ ಬಾಲಕನ ಮನಸ್ಸಿನ ಮೇಲೆ ಕ್ರೂರ ಹೆಜ್ಜೆಗಳನ್ನಿಟ್ಟಿದ್ದರು. ಆತ ಅಪ್ಪನನ್ನು ತೀವ್ರವಾಗಿ ದ್ವೇಷಿಸಲು ಶುರು ಮಾಡಿದ್ದ. ಈ ದ್ವೇಷದ ಅಂತಿಮ ಪರಿಣಾಮವಾದರೂ ಏನು?

ಬೆಳೆದ ಆ ಬಾಲಕ ಒಮ್ಮೆ ತೀವ್ರ ಒತ್ತಡಕ್ಕೊಳಗಾಗಿ, ನಿಲುವುಗನ್ನಡಿಗೆ ಮುಷ್ಟಿಯಲ್ಲಿ ಗುದ್ದಿಬಿಟ್ಟಿದ್ದ. ಕೈಯಲ್ಲಿ ರಕ್ತಸ್ರಾವ ಆಗುತ್ತಿರುವಾಗ, ಉಪಚರಿಸುತ್ತ ಮಾತನಾಡಿದ ವೈದ್ಯರಿಗೆ ಮನೆಯ ಎಲ್ಲ ವಿಚಾರಗಳು ಗೊತ್ತಾಗಿವೆ.

ಶಿವಮೊಗ್ಗ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಡಾ. ಕಲೀಮ್ ಉಲ್ಲಾ ಹೇಳುವ ಪ್ರಕಾರ, ‘ದೊಡ್ಡ ಮಗನ ಕಣ್ಣಲ್ಲಿ ಸಿಟ್ಟು ಮಡುಗಟ್ಟುವುದು ಕಾಣಿಸುತ್ತಲೇ ಅಪ್ಪನಿಗೆ ಎದೆ ಧಸಕ್ಕೆನ್ನಲು ಶುರುವಾಯಿತು.’ ಅಂತಹ ಸಂದರ್ಭದಲ್ಲಿ ಸಮಾಲೋಚನೆಯಷ್ಟೇ ಸಮಾಧಾನ ತರಬಹುದು. ಆದರೆ ಎಲ್ಲ ಸಂದರ್ಭಗಳಲ್ಲಿಯೂ ಮನಸ್ಸಿನ ಮೇಲಾದ ಗಾಯ ಮಾಸುವಂತೆ ಮಾಡುವುದು ಸಾಧ್ಯವಿಲ್ಲ ಅಲ್ಲವೇ.

### ಪ್ರೀತಿಗೆಲ್ಲಿ ಕೊನೆ?

‘ನನ್ನನ್ನು ಅಪ್ಪಅಮ್ಮ ಸಾಕುಬೇಕೆನಿಸುವಷ್ಟು ಪ್ರೀತಿಸುತ್ತಾರೆ’ ಎಂದು ಮಕ್ಕಳು ಎಂದೂ ಹೇಳುವುದೇ ಇಲ್ಲ. ಮಕ್ಕಳಿಗೆ ಎಷ್ಟು ಪ್ರೀತಿ ಕೊಟ್ಟರೂ ಬೇಕು. ಹಾಗೆ ನೋಡಿದರೆ ಕೌಟುಂಬಿಕ ಜೀವನದ ಉದ್ದೇಶವೇ ಪ್ರೀತಿಯ ಬಟ್ಟಲಿನಿಂದ ಸಂತೃಪ್ತಿಯನ್ನು ಹನಿಹನಿಯಾಗಿ ಕುಡಿಯುವುದು. ದಂಪತಿಯು ಈ ಸವಿಯನ್ನು ಅರಿತರೆ ಪರಿಸ್ಥಿತಿ ಕೈಮೀರದಂತೆ ನೋಡಿಕೊಳ್ಳಬಹುದೇನೋ.

ಕಲೀಮ್ ಉಲ್ಲಾ ಹಲವು ಮಕ್ಕಳಿಗೆ ಕೌನ್ಸೆಲಿಂಗ್ ಮಾಡಿರುವ ಅನುಭವವುಳ್ಳವರು. ‘ಮನೆಯಲ್ಲಿ ಸಮಸ್ಯೆ ಇದ್ದಾಗ ಮೂರನೇ ವ್ಯಕ್ತಿಯ ಪ್ರೀತಿ ಇಷ್ಟವಾಗುತ್ತದೆ. ಮಕ್ಕಳು ಬೆಳೆಯುತ್ತಲೇ ಗೌಪ್ಯತೆ, ರಹಸ್ಯ ಕಾಪಾಡುವುದನ್ನು ಸುಖಾಸುಮ್ಮನೇ ಇಷ್ಟಪಡುತ್ತಾರೆ. ಅಪ್ಪ ಅಮ್ಮ ಮಕ್ಕಳ ಇಂತಹ ‘ಸೀಕ್ರೆಟ್’ಗಳನ್ನೂ ಗೌರವಿಸಬೇಕು. ಆದರೆ ಅವರ ಕಷ್ಟಗಳಿಗೆ ನಾವಿಬ್ಬರೂ ಸದಾ ಒತ್ತಾಸೆಯಾಗಿ ಇದ್ದೇವೆ ಎನ್ನುವ ಸುರಕ್ಷೆಯ ಭಾವವನ್ನೂ ಮೂಡಿಸಬೇಕೇ ವಿನಃ ಪರಸ್ಪರ ದೂರುತ್ತ ಸಮಯಾಲಾಪ ಮಾಡುವುದು ಸರಿಯಲ್ಲ’ ಎಂದು ಕಲೀಂ ಹೇಳುತ್ತಾರೆ.

ಅಲ್ಲೊಂದು ಸಂಸಾರದ ಗಲಾಟೆ ಬಹಳ ವಿಚಿತ್ರವೆಂಬಂತೆ ಇತ್ತು. ಅಮ್ಮ ಮಗ ಬಹಳ

